## 62

# ಪಸ್ಕ

# (26:17-29)

ಘಟನಾವಳಿಗಳು ಒಟ್ಟಾರೆ ಸ್ಪಷ್ಟವಾಗಿಲ್ಲವಾದರು, ಪಸ್ಕಹಬ್ಬವನ್ನು ಆಚರಿಸುವದನ್ನು ಗುರುವಾರದಲ್ಲಿ ಮಾಡುತ್ತಾರೆ (26:17-19). ಪಸ್ಕ ಹಬ್ಬವನ್ನು ಆಚರಿಸುವದು ಮತ್ತು ಕರ್ತನ ಭೋಜನ ಸಂಸ್ಕಾರ ಸಾಯಂಕಾಲ ನಡೆಯಿತು. ಯೆಹೂದ್ಯರ ಪ್ರಕಾರ ದಿನಗಳ ಎಣಿಕೆ (6.00 ಗಂಟೆ ಸಾಯಂಕಾಲದಿಂದ 6.00 ಗಂಟೆ ಸಾಯಂಕಾಲದವರೆಗೆ), ಅದು ಶುಕ್ರವಾರವಾಗಿತ್ತು (26:20-29).

## ಸಿಧ್ಧತೆ (26:17-19)

**[17]ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು - ಪಸ್ಕದ ಊಟಮಾಡುವದಕ್ಕೆ ನಾವು ನಿನಗೆ ಎಲ್ಲಿ [18]ಸಿದ್ಧಮಾಡಬೇಕೆನ್ನುತ್ತೀ ಎಂದು ಕೇಳಲು ಆತನು - ನೀವು ಪಟ್ಟಣದೊಳಕ್ಕೆ ಇಂಥವನ ಬಳಿಗೆ ಹೋಗಿ ಅವನಿಗೆ ನನ್ನ ಕಾಲ ಸಮೀಪವಾಯಿತು, ನಿನ್ನ ಮನೆಯಲ್ಲಿ ನನ್ನ ಶಿಷ್ಯರ ಸಂಗಡ ಪಸ್ಕಹಬ್ಬಮಾಡುತ್ತೇನೆಂದು ಬೋಧಕನು ಹೇಳುತ್ತಾನೆ ಎಂಬುದಾಗಿ ಹೇಳಿರಿ ಅಂದನು. [19]ಶಿಷ್ಯರು ಯೇಸು ತಮಗೆ ಅಪ್ಪಣೆಕೊಟ್ಟಂತೆ ಮಾಡಿ ಪಸ್ಕಕ್ಕೆ ಸೌರಿಸಿದರು.**

**ವಚನ 17. ಪಸ್ಕಹಬ್ಬವು** ಯೆಹೂದ್ಯರ ಆಚರಣೆ ಇಸ್ರಾಯೇಲರನ್ನು ಐಗುಪ್ತರ ದಾಸತ್ವದಿಂದ ಬಿಡುಗಡೆಗೊಳಿಸಿದ ದಿನ. ಐಗುಪ್ತರ ಚೊಚ್ಚಲ ಮಕ್ಕಳನ್ನು ಸಂಹರಿಸಿದಾಗ ದೇವರು, ಇಸ್ರಾಯೇಲರ ಮನೆಯ ಬಾಗಿಲುಗಳ ನಿಲುವು ಪಟ್ಟಿಗಳಿಗೆ ಹಚ್ಚಿದ ರಕ್ತವನ್ನು ನೋಡಿ ಆ ಮನೆಗಳನ್ನು "ದಾಟಿ ಹೋದನು" (ವಿಮೋಚನಕಾಂಡ 12:13, 23, 27). ಪಸ್ಕ ಹಬ್ಬ ಒಂದು ರಾತ್ರಿಯ ಆಚರಣೆ ಅದರ ನಂತರ ಏಳು ದಿನಗಳವರೆಗೆ ಹುಳಿಯಿಲ್ಲದ ರೊಟ್ಟಿಯನ್ನು ತಿನ್ನಬೇಕು. "ಹುಳಿಯಿಲ್ಲದ ರೊಟ್ಟಿಯ ಹಬ್ಬ" ಸಂಪೂರ್ಣ ಅವಧಿಗೆ ನೀಡಿದ ಹೆಸರು (ವಿಮೋಚನಕಾಂಡ 12:15-20; ಯಾಜಕಕಾಂಡ 23:4-8; ಅರಣ್ಯಕಾಂಡ 28:16-25; ಧರ್ಮೋಪದೇಶಕಾಂಡ 16:1-8). ಪಸ್ಕದ ಭೋಜನವನ್ನು **ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿವಸದಲ್ಲಿ,** ಮಾಡುವದರಿಂದ "ಹುಳಿಯಿಲ್ಲದ ರೊಟ್ಟಿ" ಮತ್ತು "ಪಸ್ಕ ಹಬ್ಬ" ಎಂಬ ಹೆಸರುಗಳನ್ನು ಪರಸ್ಪರ ಬದಲಾಯಿಸಿಕೊಳ್ಳುವ ಹೆಸರುಗಳಾಗಿದ್ದವು (ಮಾರ್ಕ 14:1, 12; ಲೂಕ 22:7).

ಅಧಿಕೃತ ಪಸ್ಕ ಹಬ್ಬದ ಆಚರಣೆ ಯೆಹೂದ್ಯರ ಅಬೀಬ ಅಥವಾ ನಿಸಾನ ತಿಂಗಳಿನ ಹದಿನಾಲ್ಕನೇ ದಿನದಲ್ಲಿ ಆಚರಿಸಲಾಗುತ್ತದೆ. ಧರ್ಮಶಾಸ್ತ್ರಕ್ಕೆ ಅನುಗುಣವಾಗಿ, ಪಸ್ಕದ ಕುರಿಯನ್ನು ತಿಂಗಳಿನ ಹತ್ತನೇ ದಿನದಲ್ಲಿ ಆಯ್ಕೆ ಮಾಡಲಾಗುತಿತ್ತು. ಕುರಿಮರಿಯನ್ನು ತಿಂಗಳಿನ ಹದಿನಾಲ್ಕನೇಯ ದಿನದವರೆಗೆ ಮನೆಯಲ್ಲಿ ಇಟ್ಟುಕೊಳ್ಳಬೇಕಾಗಿತ್ತು ಮತ್ತು ನಂತರ ಯಜ್ಞವನ್ನು ಅರ್ಪಿಸುತ್ತಿದ್ದರು (ವಿಮೋಚನಕಾಂಡ 12:2-6). ಅದನ್ನು "ಮುಸ್ಸಂಜೆಯಲ್ಲಿ" ಕೊಯ್ಯಬೇಕಾಗಿತ್ತು ಇದರ ನಿಜವಾದ ಅರ್ಥ "ಎರಡು ಸಾಯಂಕಾಲಗಳ ಮಧ್ಯದಲ್ಲಿ." ಇದು ಬಹಳ ಮಟ್ಟಿಗೆ ಸೂರ್ಯಸ್ತ ಮತ್ತು ಕತ್ತಲು ಇದರ ಮಧ್ಯದ ಸಮಯವನ್ನು ಉಲ್ಲೇಖಿಸುತ್ತದೆ.

ಹೊಸ ಒಡಂಬಡಿಕೆಯ ಸಮಯಗಳಲ್ಲಿ, ಅನುಸಾರವಾಗಿ, ಪಸ್ಕಹಬ್ಬದ ಕುರಿಯನ್ನು ಒಂಭತ್ತು ಮತ್ತು ಹನ್ನೊಂದನೇ ತಾಸಿನ ಮಧ್ಯದಲ್ಲಿ ಯಜ್ಞಮಾಡಲಾಗುತಿತ್ತು (3.00 ಮತ್ತು 5.00).[1] ಸಾವಿರಾರು ಜನ ಯಾತ್ರಿಕರು ಹಬ್ಬಕ್ಕಾಗಿ ಯೆರೂಸಲೇಮಿಗೆ ಬರುತ್ತಿದ್ದದರಿಂದ ಕುರಿಗಳನ್ನು ಬಲಿ ಅರ್ಪಿಸುವ ಕಾರ್ಯ ದೇವಾಲಯದಲ್ಲಿ ಮೂರು ಕಾಲವಧಿಯ ದೊಡ್ಡ ಗುಂಪುಗಳಲ್ಲಿ ಮಾಡಲಾಗುತ್ತಿತ್ತು. ಜನರು ತಮ್ಮ ಸ್ವಂತ ಪ್ರಾಣಿಗಳನ್ನು ಕೊಲ್ಲುವ ಜವಾಬ್ದಾರಿ ಯನ್ನು ತಾವೇ ಹೊತ್ತುಕೊಳ್ಳಬೇಕಾಗಿತ್ತು. ಅವರು ಅವುಗಳನ್ನು ಗೋಡೆಯ ಮೇಲಿರುವ ಕೊಂಡಿಗಳಿಗೆ ಅಥವಾ ಕಂಬಗಳಿಗೆ ಅವುಗಳ ಚರ್ಮಸುಲಿಯುವದಕ್ಕೋಸ್ಕರ ತೂಗು ಹಾಕುತ್ತಿದ್ದರು. ಯಾಜಕರುಗಳು ಸಾಲಿನಲ್ಲಿ ನಿಂತು ಕುರಿಯ ಮೂಲಕ ಸೋರುತ್ತಿರುವ ರಕ್ತವನ್ನು ಬೋಗೋಣಿಗಳಲ್ಲಿ ತುಂಬಿ ಸಾಗಿಸುತ್ತಿದ್ದರು. ವೇದಿಕೆಯ ಅತೀ ಸಮೀಪದಲ್ಲಿರುವ ಯಾಜಕನು ರಕ್ತವನ್ನು ವೇದಿಕೆಯ ತಳದಲ್ಲಿ ಸುರಿಯುತ್ತಿದ್ದನು. ಜನರು ಯಜ್ಞ ಅರ್ಪಿಸಿದ ಪ್ರಾಣಿಯ ಭಾಗವನ್ನು ತೆಗೆದುಕೊಂಡು ಅದನ್ನು ಯಾಜಕನಿಗೆ ನೀಡುತ್ತಿದ್ದರು, ಅವನು ಅದನ್ನು ವೇದಿಯ ಮೇಲೆ ಸುಡಿತ್ತಿದ್ದನು. ಕುರಿಯ ಉಳಿದ ಭಾಗವನ್ನು ಮನೆಗೆ ತೆಗೆದುಕೊಂಡು ಹೋಗುತ್ತಿದ್ದರು; ಮಾಂಸವನ್ನು ಕಟ್ಟಿಗೆಯಿಂದ ಚುಚ್ಚಿ ಮಣ್ಣಿನ ಪಾತ್ರೆಯಲ್ಲಿ ಸುಡುತ್ತಿದ್ದರು ನಂತರ ಪಸ್ಕದ ಭೋಜನದಲ್ಲಿ ಊಟಮಾಡುತ್ತಿದ್ದರು.[2]

**ವಚನ 18.** ಎಲ್ಲಿ ಪಸ್ಕಹಬ್ಬವನ್ನು ಆಚರಿಸಬೇಕು ಎಂಬ ಅಪೊಸ್ತಲರ ಪ್ರಶ್ನೆಗೆ ಯೆರೂಸಲೇಮಿಗೆ **ಹೋಗಿ** ಇಂಥವನನ್ನು ಹುಡುಕಿರಿ ಎಂದು ಹೇಳಿದನು. ಆತನು ತುಂಬಿದ ಕೊಡವನ್ನು ಹೊತ್ತುಕೊಂಡು ನಿಮ್ಮೆದುರಿಗೆ ಬರುವನು (ಮಾರ್ಕ 14:13; ಲೂಕ 22:10). ಅವನನ್ನು ಸರಳವಾಗಿ ಗುರುತಿಸಬಹುದಿತ್ತು ಯಾಕೆಂದರೆ ಸಾಮಾನ್ಯವಾಗಿ ನೀರನ್ನು ತರುವದು ಸ್ತ್ರೀಯರ ಜವಾಬ್ದಾರಿಯಾಗಿತ್ತು. ಶಿಷ್ಯರು ಆ ಮನುಷ್ಯನನ್ನು ಅನುಸರಿಸಿ ಅವನ ಮನೆಗೆ ಹೋಗಿ ಈ ಸಂದೇಶವನ್ನು ನೀಡಬೇಕಾಗಿತ್ತು.

ಸಂದೇಶದ ಮೊದಲನೆಯ ಭಾಗ, **ನನ್ನ ಕಾಲ ಸಮೀಪವಾಯಿತು** ಇದು ಸಮೀಪಿ ಸುತ್ತಿರುವ ಯೇಸುವಿನ ಮರಣವನ್ನು ಸೂಚಿಸುತ್ತದೆ. ಪಸ್ಕಹಬ್ಬದ ಸಿದ್ಧತೆಗಳನ್ನು ಗುರುವಾರ ಮಾಡಿಕೊಂಡಿದ್ದರು ಮತ್ತು ಮರುದಿನ ಯೇಸುವನ್ನು ಶಿಲುಬೆಗೆ ಜಡಿಯಬೇಕಾಗಿತ್ತು. ಇದೇ ರೀತಿಯ ಭಾಷೆ ಯೋಹಾನನ ಸುವಾರ್ತೆಯಲ್ಲಿ ಅನೇಕಾವರ್ತಿ ಕಂಡುಬರುತ್ತದೆ. "ಸಮಯ" (*kairos*), ಎನ್ನುವದಕ್ಕೆ ಬದಲಾಗಿ "ಕಾಲ" (*hōra*) ಎಂದು ಯೋಹಾನ ಸುವಾರ್ತೆಯಲ್ಲಿದೆ (ಯೋಹಾನ 2:4; 7:30; 8:20; 12:23; 13:1; 17;1; ನೋಡಿರಿ ಮತ್ತಾಯ 6:45).

ಸಂದೇಶದ ಎರಡನೆಯ ಭಾಗ, **ನಿನ್ನ ಮನೆಯಲ್ಲಿ ನನ್ನ ಶಿಷ್ಯರ ಸಂಗಡ ಪಸ್ಕಹಬ್ಬ ಮಾಡುತ್ತೇನೆ.** ಶಿಷ್ಯರು ಆ ಮನುಷ್ಯನನ್ನು ಕೇಳಬೇಕಾಗಿತ್ತು, "ನಾನು ತನ್ನ ಶಿಷ್ಯರ ಸಂಗಡ ಭೋಜನಮಾಡುವದಕ್ಕೆ ಭೋಜನ ಶಾಲೆ ಎಲ್ಲಿ?" (ಲೂಕ 22:12), ಮತ್ತು ಅವರಿಗೆ ಆತನು "ವಿಶಾಲವಾದ ಸಿದ್ಧಪಡಿಸಿದ ಮೇಲಂತಸ್ತಿನ ಕೊಠಡಿಯನ್ನು" ಅವರಿಗೆ ತೋರಿಸುತ್ತಾನೆ. ಅಲ್ಲಿ ಅವರು ಪಸ್ಕ ಹಬ್ಬಕ್ಕೆ ಸಿದ್ಧಪಡಿಸಬೇಕಾಗಿತ್ತು (ಲೂಕ 22:11). ಯೆರೂಸಲೇಮಿ ನಲ್ಲಿ ವಾಸಿಸುವವರು ಸಾಮಾನ್ಯವಾಗಿ ತಮ್ಮಲ್ಲಿರುವ ಹೆಚ್ಚಿನ ಸ್ಥಳವನ್ನು ಪಸ್ಕಹಬ್ಬವನ್ನು ಆಚರಿಸಲು ಬಂದ ಇತರ ಯೆಹೂದ್ಯ ಕುಟುಂಬಗಳೊಂದಿಗೆ ಹಂಚಿಕೊಳ್ಳುತ್ತಿದ್ದರು. ಯೇಸುವನ್ನು ಬೋಧಕನು ಎಂದು ಸಂಬೋಧಿಸಿದ್ದು ಆತನು ಶಿಷ್ಯನಾಗಿದ್ದಾನೆ ಎಂಬುದನ್ನು ಸೂಚಿಸುತ್ತದೆ.

**ವಚನ 19. ಶಿಷ್ಯರಿಗೆ** ಕರ್ತನಿಗೆ ವಿಧೇಯರಾದಾಗ, ಅವರು ಆತನು ಹೇಳಿದಂತೆಯೇ ಎಲ್ಲವನ್ನು ಕಂಡುಕೊಂಡರು. ನಂತರ ಅವರು **ಪಸ್ಕ ಹಬ್ಬಕ್ಕೆ ಸಿದ್ಧತೆಯನ್ನು** ಮಾಡಿಕೊಂಡರು. ಯಜ್ಞ ಅರ್ಪಿಸುವದು ಮತ್ತು ವಧಿಸಿದ ಕುರಿಯನ್ನು ಸುಡುವದರೊಂದಿಗೆ ಶಿಷ್ಯರು ಹುಳಿಯಿಲ್ಲದ ರೊಟ್ಟಿಯನ್ನು, ದ್ರಾಕ್ಷಾರಸವನ್ನು, ಕಹಿಯಾದ ಸೊಪ್ಪು (ಹಣ್ಣುಗಳ ಮತ್ತು ಕಲಬೆರಕೆ ಮಾಡಿದ ಕಾಯಿಗಳ ರಸ) ಸಹ ಕೊಂಡುಕೊಳ್ಳಬೇಕಾಗಿತ್ತು.

## ವಿಶ್ವಾಸಘಾತಕನನ್ನು ಪ್ರಕಟಿಸಿದ್ದು (26:20-25)

**[20]ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಸಂಗಡ ಊಟಕ್ಕೆ ಕೂತುಕೊಂಡನು. [21]ಅವರು ಊಟ ಮಾಡುತ್ತಿರುವಾಗ ಆತನು - ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. [22]ಆಗ ಅವರು ಬಹಳ ದುಃಖ ಪಟ್ಟು - ಸ್ವಾಮೀ, ನಾನಲ್ಲವಲ್ಲ ಎಂದು ಪ್ರತಿಯೊಬ್ಬರು ಕೇಳತೊಡಗಿದರು. [23]ಅದಕ್ಕಾತನು - ಬಟ್ಟಲಲ್ಲಿ ನನ್ನ ಸಂಗಡ ಕೈ ಅದ್ದಿದವನೇ ನನ್ನನ್ನು ಹಿಡುಕೊಡುವನು. [24]ಮನುಷ್ಯಕುಮಾರನು ಹೊರಟುಹೋಗುತ್ತಾನೆ ಸರಿ; ಹಾಗೆ ಆತನ ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು ಅಂದನು. [25]ಆಗ ಆತನನ್ನು ಹಿಡುಕೊಡಬೇಕೆಂದಿದ್ದ ಯೂದನು - ಗುರುವೇ, ನಾನಲ್ಲವಲ್ಲ? ಅನ್ನಲಾಗಿ ಯೇಸು ಅವನಿಗೆ - ನೀನೇ ಹೇಳಿದ್ದೀ? ಎಂದು ಹೇಳಿದನು.**

**ವಚನ 20.** 26:20-25ರಲ್ಲಿರುವ ಸಂಭಾಷಣೆಯವರೆಗೆ, **ಸಂಜೆಯಾಯಿತು** ಮತ್ತು **ಯೇಸು** ಪಸ್ಕಭೋಜನವನ್ನು **ಹನ್ನೆರಡು ಮಂದಿ ಶಿಷ್ಯರೊಂದಿಗೆ** ಹಂಚಿಕೊಳ್ಳುತ್ತಿದ್ದನು. ಅವನು ಈಗಾಗಲೇ ಅವರ ಪಾದಗಳನ್ನು ತೊಳೆದಿದ್ದನು - ಯೂದನನ್ನು ಒಳಗೊಂಡು - ಈ ಅಹಂಕಾರದ ಹೃದಯಕ್ಕೆ ದೀನತೆಯ ಪಾಠವನ್ನು ಬೋಧಿಸುವದಕ್ಕಾಗಿ (ಯೋಹಾನ 13:3-11).[3] ಆ ಕಾಲದ ಸಂಪ್ರದಾಯಕ್ಕೆ ಅನುಗುಣವಾಗಿ, ಕರ್ತನು ಮತ್ತು ಆತನ ಅಪೊಸ್ತಲರು ಮೇಜಿನ ಬಳಿಯಲ್ಲಿ ಕುಳಿತಿರಲಿಕ್ಕಿಲ್ಲ, Leonardo Da Vinci's ಅವರ ಜನಪ್ರಿಯ ವರ್ಣಚಿತ್ರ ಇದನ್ನು ಚಿತ್ರಿಸುತ್ತದೆ. ಬದಲಾಗಿ ಅವರು ಒರಗಿದ್ದರು (*anakeimai*) ಬಹುಶಃ **ಮೇಜಿನ** ಸುತ್ತಲೂ ಇರುವ ದಿಂಬುಗಳ ಮೇಲೆ ಒರಗಿಕೊಂಡಿರಬಹುದು.

ಮೂಲತಃ ಪಸ್ಕ ಹಬ್ಬವನ್ನು ನಿಂತುಕೊಂಡು ಆಚರಿಸುತ್ತಿದ್ದರು. ಕರ್ತನು ಇಸ್ರಾಯೇಲರಿಗೆ, "ನೀವು ನಡುವನ್ನು ಕಟ್ಟಿ ಕೆರವನ್ನು ಮೆಟ್ಟಿಕೊಂಡು ಕೋಲುಹಿಡಿದು ತ್ವರೆಯಾಗಿ ಮಾಡಬೇಕು" ಎಂದು ಹೇಳಿದನು (ವಿಮೋಚನಕಾಂಡ 12:11). ಅವರು ತಮ್ಮ ದೇಹದ ಭಂಗಿಯನ್ನು ಊಹಿಸಿಕೊಳ್ಳಬೇಕಾಗಿತ್ತು, ದೇವರು ಅವರನ್ನು ಬೇಗನೆ ಐಗುಪ್ತದಿಂದ ಬಿಡುಗಡೆಗೊಳಿಸುತ್ತಾನೆ ಎಂಬುದನ್ನು ನಂಬಬೇಕಾಗಿತ್ತು. ಆದಾಗ್ಯೂ, ಯೇಸುವಿನ ದಿನಗಳಲ್ಲಿ ಪಸ್ಕಭೋಜನವನ್ನು ಸಾಂಪ್ರದಾಯಿಕವಾಗಿ ಒರಗಿಕೊಂಡಾಗ ಮಾಡಬಹುದಾಗಿತ್ತು.

ಗ್ರೀಕೋ-ರೋಮನ್ ಸಂಸ್ಕೃತಿಯಿಂದ ಪ್ರಭಾವಿತರಾದ ಯೆಹೂದ್ಯರು ಸಾಮಾನ್ಯವಾಗಿ *triclinium* ರೀತಿಯಲ್ಲಿ ಉಪಯೋಗಿಸುತ್ತಿದ್ದರು. ಈ ಊಟವನ್ನು ಮಾಡುವಾಗ ಅವರು ಕುಳಿತುಕೊಳ್ಳುವ ವ್ಯವಸ್ಥೆ U-ಆಕಾರದಲ್ಲಿ ಇರುತ್ತಿತ್ತು; ಅದರ ಮೂರು ಬದಿಗಳನ್ನು ಕೋಣೆಯ ಸುತ್ತಲು ವಿಸ್ತರಿಸಲಾಗುತ್ತಿತ್ತು. ಕಡಿಮೆ ಎತ್ತರವಿರುವ ಊಟದ ಮೇಜನ್ನು ಮಧ್ಯದಲ್ಲಿ ಇಡುತ್ತಿದ್ದರು. ಅತಿಥಿಗಳು ತಮ್ಮ ಮಗ್ಗಲಿಗೆ ಅಥವಾ ಹೊಟ್ಟೆಯೆಡೆಗೆ ಒರಗಿಕೊಂಡು ಕಾಲನ್ನು ಮೇಜಿನಿಂದ ದೂರಕ್ಕೆ ಚಾಚಿ ಒರಗಿಕೊಳ್ಳುತ್ತಿದ್ದರು. ಅವರು ತಮ್ಮ ಎಡಗಡೆಯ ಮೊಣಕೈಯ ಮೇಲೆ ಒರಗಿ ತಮ್ಮ ಬಲಗೈಯಿಂದ ಊಟ ಮಾಡುತ್ತಿದ್ದರು. ಅತಿಥೇಯನು ಮಧ್ಯದ ಸ್ಥಾನದಲ್ಲಿ ಮತ್ತು ಅತಿಥಿಗಳು ಬಲಗಡೆ ಮತ್ತು ಎಡಗಡೆಯ ಸ್ಥಾನದಲ್ಲಿ ಒರಗಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಯೇಸು ಅತಿಥೇಯನಾಗಿ ಸೇವೆಮಾಡಿದನು, ಆತನ ಪ್ರಿಯ ಶಿಷ್ಯನಾದ ಯೋಹಾನನು ಆತನ ಬಲಗಡೆಯಲ್ಲಿ ಕುಳಿತುಕೊಂಡಿದ್ದನು (ಯೋಹಾನ 13:23). ಪೊಂಪಿಲಿಯಲ್ಲಿ ಪ್ರಾಚೀನ Vesuvius ಲೋಕದ *triclinium*ನ ಉದಾಹರಣೆ ಕಂಡುಬರುತ್ತದೆ. ಬೆಟ್ಟದ ಜ್ವಾಲಾಮುಖಿಯ ಬೂದಿಯಲ್ಲಿ ಅದನ್ನು ಕಾಯ್ದಿಡಲಾಗಿತ್ತು ಅದನ್ನು ಕ್ರಿ.ಶ. 79ರಲ್ಲಿ ಸ್ಫೋಟವಾಗಿದೆ.

ಮೊದಲನೆಯ ಶತಮಾನದಲ್ಲಿ, ಯೆಹೂದ್ಯರು ಒಂದು "ಆರಾಧನೆಯ ಕ್ರಮವನ್ನು"

(*seder*) ಪಸ್ಕಹಬ್ಬದ ಸಂದರ್ಭದಲ್ಲಿ ಅನುಸರಿಸುತ್ತಿದ್ದರು.[4] ಆಶೀರ್ವಾದದ ನಂತರ, ದ್ರಾಕ್ಷಾರಸದ ಮೊದಲನೆಯ ಬಟ್ಟಲನ್ನು ನೀಡುತ್ತಿದ್ದರು. ಇದರ ಹಿಂದೆಯೇ ಕಹಿಯಾದ ಸೊಪ್ಪುಗಳನ್ನು ಮತ್ತು ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುತ್ತಿದ್ದರು.[5] ನಂತರ ದ್ರಾಕ್ಷಾರಸದ ಎರಡನೆಯ ಬಟ್ಟಲನ್ನು ನೀಡುತ್ತಿದ್ದರು ವಿಮೋಚನಕಾಂಡ 12:26ಕ್ಕೆ ಅನುಗುಣವಾಗಿ, ಮಗನು ತಂದೆಗೆ ಪಸ್ಕಹಬ್ಬದ ಅರ್ಥವನ್ನು ಕೇಳುತ್ತಿದ್ದನು. ತಂದೆಯು ಐಗುಪ್ತದ ದಾಸತ್ವ ಮತ್ತು ವಿಮೋತನೆಯ ಕತೆಯನ್ನು ತಾನು ವೈಯಕ್ತಿಕವಾಗಿ ಅನುಭವಿಸಿದ ರೀತಿಯಲ್ಲಿ ಮಗನಿಗೆ ಹೇಳುತ್ತಿದ್ದನು (ವಿಮೋಚನಕಾಂಡ 13:8). ಕೀರ್ತನೆಯ ಮೊದಲನೆಯ ಭಾಗವನ್ನು (ಕೀರ್ತನೆ 113; 114) ಹಾಡುತ್ತಿದ್ದರು, ಮತ್ತು ದ್ರಾಕ್ಷಾರಸದ ಮೂರನೆಯ ಬಟ್ಟಲನ್ನು ಸುರಿಯುತ್ತಿದ್ದರು. ಪಸ್ಕದ ಕುರಿ[6] ಮತ್ತು ಹುಳಿಯಿಲ್ಲದ ರೊಟ್ಟಿಯನ್ನು ತಿನ್ನುತ್ತಿದ್ದರು. ಇದರ ಹಿಂದೆ ದ್ರಾಕ್ಷಾರಸದ ನಾಲ್ಕನೆಯ ಬಟ್ಟಲನ್ನು ನೀಡುತ್ತಿದ್ದರು ಮತ್ತು ಕೀರ್ತನೆಯ ಎರಡನೆಯ ಭಾಗವನ್ನು ಹಾಡುತ್ತಿದ್ದರು (ಕೀರ್ತನೆ 115-118).

**ವಚನ 21.** ಭೋಜನದ ಸಮಯದಲ್ಲಿ ಯೇಸು ತನ್ನ ಶಿಷ್ಯರಿಗೆ ಅವರಲ್ಲಿ **ಒಬ್ಬನು** ತನ್ನನ್ನು **ಹಿಡುಕೊಡುವನು** ಎಂದು ಹೇಳಿದನು. ಶಿಷ್ಯರು ತಮ್ಮ ಕಿವಿಗಳನ್ನು ನಂಬಲಿಲ್ಲ, ಮತ್ತು ಪರಸ್ಪರ ಬೆರಳು - ತೋರಿಸುವ ಕಾರ್ಯ ಪ್ರಾರಂಭವಾಯಿತು. ಲೂಕನ ಪ್ರಕಾರ, "ಇಂಥ ಕೆಲಸವನ್ನು ಮಾಡಬೇಕೆಂದಿರುವವನು ನಮ್ಮಲ್ಲಿ ಯಾವನಾಗಿರಬಹುದು ಎಂದು ಒಬ್ಬರನ್ನೊಬ್ಬರು ಕೇಳತೊಡಗಿದರು" (ಲೂಕ 22:23).

**ವಚನ 22.** ಯಜಮಾನನ್ನು ಹಿಡಿದುಕೊಡುವ ವಿಚಾರ ಶಿಷ್ಯರಿಗೆ ಸಹಿಸಲು ಸಾಧ್ಯವಾಗಲಿಲ್ಲ, ಅದು ಅವರ ಆಳವಾದ ವೇದನೆಗೆ ಕಾರಣವಾಯಿತು (ನೋಡಿರಿ 17:23; 18:31). **ಪ್ರತಿಯೊಬ್ಬರು** ಯೇಸುವನ್ನು **ಸ್ವಾಮಿ, ನಾನಲ್ಲವಲ್ಲ?** ಎಂದು ಕೇಳಿದರು. ಪ್ರಶ್ನೆಯು ಕಡಾಖಂಡಿತವಾಗಿ ಹೇಳಿದಂತಿದೆ ("ಸ್ವಾಮೀ, ನಾನಲ್ಲವಲ್ಲ"), ಮತ್ತು ಅದು ನಕರಾತ್ಮಕ ಉತ್ತರವನ್ನು ನಿರೀಕ್ಷಿಸುತ್ತದೆ.

**ವಚನ 23.** ಯೇಸು ಪ್ರತ್ಯುತ್ತರವನ್ನು ನೀಡಿದನು, **ಬಟ್ಟಲಿನಲ್ಲಿ ನನ್ನ ಸಂಗಡ ಕೈ ಅದ್ದಿದವನೇ ನನ್ನನ್ನು ಹಿಡುಕೊಡುವನು.** ಈ ಉಲ್ಲೇಖವು ಒಂದು ತುಂಡು ರೊಟ್ಟಿಯನ್ನು ತೆಗೆದುಕೊಂಡು ರಸದಲ್ಲಿ ಅದ್ದುವಂತಿದೆ.[7] ಆ ಸಂಸ್ಕೃತಿಯಲ್ಲಿ, ಇನ್ನೊಬ್ಬ ವ್ಯಕ್ತಿಯೊಂದಿಗೆ ಊಟಮಾಡುವದು ಸ್ನೇಹ ಮತ್ತು ಅನ್ಯೋನ್ಯತೆಯ ಸಾಂಕೇತವಾಗಿದೆ. ಇನ್ನೊಬ್ಬ ವ್ಯಕ್ತಿಯೊಂದಿಗೆ ಊಟವನ್ನು ಹಂಚಿಕೊಳ್ಳುವದು "ನಾನು ನಿನಗೆ ಕೇಡನ್ನುಂಟು ಮಾಡುವದಿಲ್ಲ" ಎಂದು ಹೇಳುವದರ ತಿರುಳಾಗಿತ್ತು. ಯೂದನು ಯೇಸುವಿನೊಂದಿಗೆ ಊಟಮಾಡಿದ್ದು ಮತ್ತು ಅದ್ದುವದಕ್ಕೆ ಒಂದೇ ಬಟ್ಟಲನ್ನು ಹಂಚಿಕೊಂಡದ್ದು, ಆತನು ಹಿಡಿದುಕೊಟ್ಟದ್ದನ್ನು ಇನ್ನೂ ಹೆಚ್ಚಿನ ಅವಮಾನಕ್ಕೆ ಕಾರಣವಾಯಿತು. ಕೀರ್ತನೆಗಾರನು, "ನಾನು ಯಾವನನ್ನು ನಂಬಿದನೋ, ಯಾವನು ನನ್ನ ಮನೆಯಲ್ಲಿ ಅನ್ನ ಪಾನಗಳನ್ನು ತೆಗೆದುಕೊಂಡನೋ, ಅಂಥ ಆಪ್ತ ಸ್ನೇಹಿತನು ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ" (ಕೀರ್ತನೆ 41:9). ಯೋಹಾನನು ಯೂದನು ಯೇಸುವನ್ನು ಹಿಡಿದುಕೊಡುವದನ್ನು ಕೊನೆಗೂ ನೆರವೇರಿಸಿದ್ದನ್ನು ಈ ವೇದಭಾಗದಲ್ಲಿ ಕಾಣುತ್ತಾನೆ (ಯೋಹಾನ 13:18).

**ವಚನ 24.** ಕರ್ತನು ಮುಂದುವರೆದು, **ಮನುಷ್ಯಕುಮಾರನು ಹೊರಟು ಹೋಗುತ್ತಾನೆ** - ಕ್ರೂಜೆಯ ಮೇಲೆ ಆತನ ಮರಣದ ಕುರಿತಾದ ಉಲ್ಲೇಖ. ಹಾಗೆ ಆತನ **ವಿಷಯವಾಗಿ ಬರೆದದೆಯಲ್ಲಾ** ಎಂಬ ವಾಕ್ಯಭಾಗ ಯೇಸುವಿನ ಮರಣವು ಹಳೆ ಒಡಂಬಡಿಕೆಯ ವೇದಭಾಗಗಳ ನೆರವೇರಿಕೆಯಾಗಿದೆ (ಕೀರ್ತನೆ 22:16; ಯೆಶಾಯ 53:3-12). ದೇವರು ಯೇಸುವು ಸಾಯಬೇಕೆಂಬುದನ್ನು ಮೊದಲೇ ನಿರ್ಧರಿಸಿದ್ದರೂ ಯೂದನು ತನ್ನ ಸ್ವಂತ ಕೃತ್ಯಕ್ಕೆ ಇನ್ನೂ ಜವಾಬ್ದಾರನಾಗಿದ್ದಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 2:23; 3:13-19; 13:27-29). ಯೂದನ ವಿಶ್ವಾಸಘಾತುಕನಕ್ಕೆ ಅಪರಾಧಿ

ಮನೋಭಾವ ಮತ್ತು ಶಿಕ್ಷೆಯಿದ್ದರೂ ಯೇಸು ಹೇಳಿದ್ದು, **ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೆದಾಗಿತ್ತು.**

**ವಚನ 25.** ಯೇಸುವನ್ನು **ಗುರುವೇ** ಎಂದು ಸಂಭೋದಿಸಿ (ನನ್ನ ಕರ್ತನೆ/ಯಜಮಾನನನೇ), **ಯೂದನು** ಇತರ ಅಪೊಸ್ತಲರಂತೆ ಅದೇ ಪ್ರಶ್ನೆಯನ್ನು ಕೇಳುತ್ತಾನೆ: **ಖಂಡಿತವಾಗಿಯೂ ಸ್ವಾಮಿ ನಾನಲ್ಲವಲ್ಲ?** (ನೋಡಿರಿ 26:22). ಯೇಸು ಅವನಿಗೆ, **ನೀನೇ ಹೇಳಿದ್ದೀ** ಎಂದು ಹೇಳಿದನು. ಇದು "ಹೌದು" ಎಂದು ಹೇಳುವದಕ್ಕೆ ಪರೋಕ್ಷವಾದ ಮಾರ್ಗ. ನಂತರ, ಯೇಸು ಮಹಾಯಾಜಕನಿಗೆ ಇದೇ ರೀತಿ ಯಾಗಿ ಹೇಳುತ್ತಾನೆ (26:64).

ಈ ದೃಶ್ಯದ ಕುರಿತು ಹೆಚ್ಚಿನ ವಿವರಗಳು ಯೋಹಾನ 13:23-30ರಲ್ಲಿ ಸಿಕ್ಕುತ್ತವೆ. ಪ್ರಿಯ ಶಿಷ್ಯನಾದ ಯೋಹಾನನು ಅವರು ಒರಗಿರುವ ಹಾಗೆಯೇ ಯೇಸುವಿನ ಎದೆಗೊರಗಿ ಸ್ವಾಮಿ ಅವನು ಯಾರು? ಎಂದು ಕೇಳಿದನು. ಯೇಸು "ನಾನು ಈ ತುತ್ತನ್ನು ಅದ್ದಿ ಯಾರಿಗೆ ಕೊಡುತ್ತೇನೋ ಅವನೇ ಎಂದು ಹೇಳಿದನು." ತಕ್ಷಣ ಅವನು "ತುತ್ತನ್ನು ಅದ್ದಿ ಯೂದನಿಗೆ ಕೊಟ್ಟನು" ಸೈತಾನನು ಯೂದನನ್ನು ಪ್ರವೇಶಿಸಿದನು, ಮತ್ತು ಯೇಸು ತನ್ನನ್ನು ಹಿಡುಕೊಡಬೇಕೆಂದಿದ್ದವನಿಗೆ, "ನೀನು ಮಾಡಬೇಕೆಂದಿರುವವನು ಬೇಗನೇ ಮಾಡು" ಎಂದು ಹೇಳಿದನು. ಇತರ ಅಪೊಸ್ತಲರು ಆತನು ಅವನಿಗೆ ಏಕೆ ಹೀಗೆ ಹೇಳುತ್ತಿದ್ದಾನೆ ಎಂಬುದನ್ನು ಅರಿಯಲಿಲ್ಲ. ಅವರು ಯೇಸು ಯೂದನನ್ನು ಹಬ್ಬಕ್ಕೆ ಬೇಕಾದ ಸಾಮಾನುಗಳನ್ನು ತರಲು ಅಥವಾ ಬಡವರಿಗೆ ಹಣವನ್ನು ಕೊಡಲು ಕಳುಹಿಸುತ್ತಿದ್ದಾನೆ ಎಂದುಕೊಂಡರು. ಯೂದನು ಬೇಗನೇ ಅಲ್ಲಿಂದ ಕತ್ತಲಲ್ಲಿ ಹೊರಟು ಹೋದನು.

## ಕರ್ತನ ಭೋಜನ ಸ್ಥಾಪನೆ (26:26-29)

**26ಅವರು ಊಟಮಾಡುತ್ತಿರುವಾಗ ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಶಿಷ್ಯರಿಗೆ ಕೊಟ್ಟು - ತಕ್ಕೊಳ್ಳಿರಿ, ತಿನ್ನಿರಿ ಇದು ನನ್ನ ದೇಹ ಅಂದನು. 27ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು - ಇದರಲ್ಲಿರುವಗದನ್ನು ಎಲ್ಲರೂ ಕುಡಿಯಿರಿ; 28ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ. 29ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವದೇ ಇಲ್ಲ ಎಂದು ನಿಮಗೆ ಹೇಳುತ್ತೇನೆ ಅಂದನು.**

ತನ್ನ ಶಿಷ್ಯರೊಂದಿಗೆ ಪಸ್ಕಹಬ್ಬದ ಔತಣದ ಸಮಯದಲ್ಲಿ ಯೇಸು ಒಂದು ಜ್ಞಾಪಕಾರ್ಥವನ್ನು ಸ್ಥಾಪಿಸಿದನು ಅದನ್ನು ಆತನ ಹಿಂಬಾಲಕರು ಈ ದಿನದವರೆಗೆ ಪ್ರತಿವಾರ "ರೊಟ್ಟಿ ಮುರಿಯುವದು" ಎಂದು ಆಚರಿಸುತ್ತಾರೆ (ಅಪೊಸ್ತಲರ ಕೃತ್ಯಗಳು 2:42; ನೋಡಿರಿ 20:7, 11), "ಅನ್ಯೋನ್ಯ ಭೋಜನ" (1 ಕೊರಿಂಥ 10:16; KJV), "ಕರ್ತನ ಮೇಜು" (1 ಕೊರಿಂಥ 10:21), ಮತ್ತು "ಕರ್ತನ ಭೋಜನ" (1 ಕೊರಿಂಥ 11:20). ಇದರೊಂದಿಗೆ ಸಂಬಂಧಿಸಿದ ಇನ್ನೊಂದು ಹೆಸರು "ಪವಿತ್ರ ಸಂಸ್ಕಾರ" "the Eucharist," ಇದು ಗ್ರೀಕ್ ಶಬ್ದದ ಅನುವಾದ ಇದರ ಅರ್ಥ "ಕೃತಜ್ಞತಾಸ್ತುತಿ" (*eucharistia*).[8] ಇದಕ್ಕೆ ಸಂಬಂಧಿಸಿದ ಕ್ರಿಯಾಪದ (*eucharisteō*) "ಕೃತಜ್ಞತೆಯನ್ನು ಅರ್ಪಿಸು" ನಾಲ್ಕು ದಾಖಲೆಗಳಲ್ಲಿ ಜ್ಞಾಪಕಾರ್ಥವಾಗಿ ಸ್ಥಾಪಿಸಿದ್ದು ಎಂದು ಕಂಡುಬರುತ್ತದೆ (26:27; ಮಾರ್ಕ 14:23; ಲೂಕ 22:19; 1 ಕೊರಿಂಥ 11:24).

**ವಚನ 26.** ಯೇಸು ಮನೆವಾರ್ತೆಯಲ್ಲಿ ಕುಟುಂಬಕ್ಕೆ ಪಸ್ಕಹಬ್ಬದ ಘಟನೆಯನ್ನು

ವಿವರಿಸುವ ತಂದೆಯ ಪಾತ್ರವನ್ನು ನಿರ್ವಹಿಸಿದನು. ಈ ಸಂದರ್ಭದಲ್ಲಿ, ಆತನು ಪಸ್ಕ ಹಬ್ಬದ ಭೋಜನಕ್ಕೆ ಎರಡು ಅಂಶಗಳ ಮೂಲಕ ಹೊಸ ಅರ್ಥವನ್ನು ನೀಡಿದನು. ಮೊದಲನೆಯದಾಗಿ, **ಯೇಸು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು ಶಿಷ್ಯರಿಗೆ ಕೊಟ್ಟು, ತಕ್ಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ ಅಂದನು.** ಅದು ಪಸ್ಕಹಬ್ಬದ ರೊಟ್ಟಿಯಾಗಿದ್ದರಿಂದ, ಅದು ಹುಳಿಯಿಲ್ಲದ ರೊಟ್ಟಿಯಾಗಿತ್ತು (ವಿಮೋಚನಕಾಂಡ 12:8). ರೊಟ್ಟಿಗಾಗಿ ಯೆಹೂದ್ಯರ ಸಾಂಪ್ರದಾಯಿಕ ಆಶೀರ್ವಾದ, "ಕರ್ತನೇ, ನಮ್ಮ ದೇವರೇ ವಿಶ್ವದ ಅರಸನೇ, ಭೂಮಿಯಿಂದ ಆಹಾರವನ್ನು ಉತ್ಪಾದಿಸುವಾತನೇ ನಿನಗೆ ಸ್ತೋತ್ರವಾಗಲಿ" (ನೋಡಿರಿ ವ್ಯಾಖ್ಯಾನ 14:19).

ಆತನು "ಇದು ನನ್ನ ದೇಹ," ಎಂದು ಹೇಳುವಾಗ ಆತನು ದೇಹದಾರಿಯಾಗಿ ನಮ್ಮ ಮಧ್ಯದಲ್ಲಿ ಉಪಸ್ಥಿತನಿದ್ದನು ಎಂಬುದನ್ನು ಜ್ಞಾಪಿಸಿಕೊಳ್ಳಬೇಕು, ಆದುದರಿಂದ ರೊಟ್ಟಿಯು ವಾಸ್ತವಿಕವಾಗಿ ಆತನ ಮಾಂಸವಾಯಿತು ಎಂದು ಹೇಳಲಿಲ್ಲ. ಬದಲಾಗಿ ರೊಟ್ಟಿಯು ಆತನ ದೇಹವನ್ನು ಪ್ರತಿನಿಧಿಸುತ್ತದೆ. ಆತನು ಮುಂದಕ್ಕೆ "ಇದು ನನ್ನ ದೇಹ, ಇದು ನಿಮಗಾಗಿ ಕೊಡಲ್ಪಟ್ಟಿದೆ, ಇದನ್ನು ನನ್ನ ನೆನಪಿಗಾಗಿ ಮಾಡಿರಿ" (ಲೂಕ 22:19). ಪೌಲನು ನಂತರ ಈ ಹೇಳಿಕೆಯನ್ನು ಕೊರಿಂಥದವರಿಗೆ ಜ್ಞಾಪಿಸುತ್ತಾನೆ (1 ಕೊರಿಂಥ 11:24).

**ವಚನ 27. ಆ ಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು - ಇದರಲ್ಲಿರುವಗದನ್ನು ಎಲ್ಲರೂ ಕುಡಿಯಿರಿ** ಎಂದು ಹೇಳಿದನು. ಖಂಡಿತವಾಗಿಯೂ ಯೇಸು ಪಾತ್ರೆಯಲ್ಲಿರುವದಕ್ಕೆ ಮಹತ್ವವನ್ನು ನೀಡಿದನೇ ಹೊರತು ಪಾತ್ರೆಗೆ ಅಲ್ಲ. "ಪಾತ್ರೆ" ಎಂದು ಉಪಯೋಗಿಸಿದ ಪದವು ಹೆಸರಿಗೆ ಬದಲಾಗಿ ಉಪಯೋಗಿಸಿದ ವಿಶೇಷಣವಾಗಿದೆ, ಅದರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ ಇನ್ನೊಂದು ಪದವನ್ನು ಉಪಯೋಗಿಸುವ ಸಾಹಿತ್ಯದ ತಂತ್ರವಾಗಿದೆ.

ಪೌಲನು, "ಊಟವಾದ ನಂತರ ಯೇಸು ಪಾತ್ರೆಯನ್ನು ತೆಗೆದುಕೊಂಡು" ಎಂದು ಹೇಳುವಾಗ (1 ಕೊರಿಂಥ 11:25), ಅದು ಆರಾಧನೆಯ ಕ್ರಮದಲ್ಲಿ ಮೂರನೆಯ ಪಾತ್ರೆಯಾಗಿರಬಹುದು (ನೋಡಿರಿ ವ್ಯಾಖ್ಯಾನ 26:20). Marvin R. Wilson ರವರು ಹೀಗೆ ಬರೆದಿದ್ದಾರೆ, "ಅದು ವಿಮೋಚನೆಯ ಪಾತ್ರೆಯೆಂದು ಹೆಸರಾಗಿತ್ತು." ರಬ್ಬೀ ಸಂಪ್ರದಾಯದಲ್ಲಿ ವಿಮೋಚನಕಾಂಡ 6:6 'ನಾನು ನಿನ್ನನ್ನು ವಿಮೋಚಿಸುತ್ತೇನೆ' ಎನ್ನುವದರೊಂದಿಗೆ ಜೋಡಿಸಲ್ಪಟ್ಟ ನಾಲ್ಕು ಹಂತದ ವಿಮೋಚನೆಯ ವಾಗ್ದಾನದಲ್ಲಿ ಮೂರನೆಯದಾಗಿತ್ತು.[9] ಲೂಕನು ಯೇಸು ರೊಟ್ಟಿಯನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಮತ್ತು ನಂತರ ಪಾತ್ರೆಯನ್ನು ತೆಗೆದುಕೊಂಡನು ಎಂದು ವರದಿ ಮಾಡುತ್ತಾನೆ. ಆದಾಗ್ಯೂ, ಕರ್ತನು ನಂತರದ ಕಾರ್ಯಕ್ಕೆ ವಿಶೇಷ ಅರ್ಥವನ್ನು ನೀಡುತ್ತಾನೆ (ಲೂಕ 22:17-20).[10] ಪೌಲನು ಇದನ್ನು "ಆಶೀರ್ವಾದದ ಪಾತ್ರೆ" ಎಂದು ಉಲ್ಲೇಖಿಸುತ್ತಾನೆ (1 ಕೊರಿಂಥ 10:16).

**ವಚನ 28.** ನಂತರ ಯೇಸು ಪಾತ್ರೆಯ ವಿಶೇಷತೆಯನ್ನು ವಿವರಿಸುತ್ತಾನೆ: **ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ,** ಪುನಃ ವಾಸ್ತವವಾಗಿ ಅದು ಆತನ ರಕ್ತವಲ್ಲ, ಆತನು ಅವರೊಂದಿಗೆ ಉಪಸ್ಥಿತನಿದ್ದನು ಮತ್ತು ಆತನ ರಕ್ತವು ಇನ್ನೂ "ಸುರಿಸಲ್ಪಟ್ಟಿರಲಿಲ್ಲ." ಪಾತ್ರೆಯು ಆತನ ರಕ್ತವನ್ನು ಪ್ರತಿನಿಧಿಸುವದಿಲ್ಲ, ಆದರೆ ಅದರಲ್ಲಿರುವದು ಆತನು ಗೊಲ್ಗಥಾ ಬೆಟ್ಟದಲ್ಲಿ ಸುರಿಸಿದ ರಕ್ತವನ್ನು ಪ್ರತಿನಿಧಿಸುತ್ತದೆ.

ಕೆಲವು ಪ್ರಾಚೀನ ಹಸ್ತಪ್ರತಿಗಳು ಒಡಂಬಡಿಕೆಯ[11] ಮೊದಲು "ಹೊಸ" ಎಂಬ ಪದವನ್ನು ಸೇರಿಸುತ್ತವೆ. ಈ ಹೊಸ ಒಡಂಬಡಿಕೆಯನ್ನು ಪ್ರವಾದಿಯಾದ ಯೆರಿಮೀಯನು ಇದು ಸ್ಥಾಪನೆಯಾಗುವದಕ್ಕಿಂತ ಕೆಲವು ನೂರು ವರ್ಷದಲ್ಲಿ ಪ್ರವಾದಿಸಿದ್ದಾನೆ (ಯೆರೆಮೀಯನು 31:31-34). ಇಬ್ರಿಯಾ ಪತ್ರಿಕೆಯ ಬರಹಗಾರನು ಯೆರೆಮಿಯನಿಂದ ತೆಗೆದುಕೊಂಡು ದೇವರು ಹೊಸ ಮತ್ತು ಉತ್ತಮವಾದ ಒಡಂಬಡಿಕೆಯನ್ನು ಕ್ರಿಸ್ತನ ಮೂಲಕ ಸ್ಥಾಪಿಸಿದ್ದಾನೆ

ಪುಸ್ತಕದಿಂದ ಹೇಳಿದ್ದಾನೆ, ದೇವರು ಕ್ರಿಸ್ತನ ಮುಖಾಂತರ ಹೊಸ ಮತ್ತು ಉತ್ತಮ ನಿಬಂಧನೆಯನ್ನು ಸ್ಥಾಪಿಸಿದ್ದಾನೆಂದು ಉಲ್ಲೇಖಿಸುತ್ತಾನೆ (ಇಬ್ರಿಯ 8:6-13).

ಹಳೆ ಒಡಂಬಡಿಕೆಯ ಪ್ರಕಾರ, ಹೊಸ ಒಡಂಬಡಿಕೆಗೆ ಅದನ್ನು ಕಾರ್ಯರೂಪದಲ್ಲಿ ತರಲು ("ಒಡಂಬಡಿಕೆಯ ರಕ್ತ") ರಕ್ತ ಬೇಕಾಗಿತ್ತು. ಇಬ್ರಿಯ 9:15-22 ಈ ವಚನಗಳು ಇದಕ್ಕೆ ಸಮವಾಗಿರುವ ವಿವರಣೆಯನ್ನು ಕೊಡುತ್ತವೆ. ಮೋಶೆ ಇಸ್ರಾಯೇಲರಿಗೆ ಧರ್ಮಶಾಸ್ತ್ರ ಕೊಡುವಾಗ ಅವರು ಅದಕ್ಕೆ ವಿಧೇಯರಾಗಲು ಒಪ್ಪಿಕೊಂಡರು, ಆತನು ಹೋರಿಗಳ ರಕ್ತವನ್ನು ತೆಗೆದುಕೊಂಡು ನಿಬಂಧನೆಯ ಪುಸ್ತಕದ ಮೇಲೆ ಮತ್ತು ಜನರ ಮೇಲೆ ಚಿಮಿಕಿಸಿದನು (ನೋಡಿರಿ 24:5-8). ಯೇಸು ಹೊಸ ಒಡಂಬಡಿಕೆಯ ಮಧ್ಯಸ್ಥಗಾರನಾಗಿ ಬಂದನು, ಜನರನ್ನು ಶುದ್ಧಪಡಿಸುವದಕ್ಕಾಗಿ ತನ್ನ ಸ್ವಂತ ರಕ್ತವನ್ನು ನೀಡಿದನು. ಕೊನೆಯ ಸಂಕಲ್ಪ ಮತ್ತು ಒಡಂಬಡಿಕೆಯಂತೆ, ಆತನು ಹೊಸ ಒಡಂಬಡಿಕೆಯ ನೇರವೇರಲಿಕ್ಕಾಗುವಂತೆ ಆತನು ಸಾಯುವದು ಅಗತ್ಯವಾಗಿತ್ತು ಅದಕ್ಕೂ ಹೆಚ್ಚಾಗಿ, ಜನರ ಪಾಪಗಳಿಗಾಗಿ ಕ್ಷಮಾಪಣೆಯನ್ನು ಹೊಂದಿಕೊಳ್ಳಲು ರಕ್ತವನ್ನು ಸುರಿಸುವದು ಅಗತ್ಯವಾಗಿತ್ತು.

ಯೇಸು "ಅನೇಕರಿಗಾಗಿ ತನ್ನ ರಕ್ತ ಸುರಿಸಲ್ಪಡುತ್ತದೆ" ಎಂದು ಹೇಳುವಾಗ ಆತನು ಯೆಶಾಯ 53ರಲ್ಲಿರುವ ಭಾಷೆಯನ್ನು ಪುನರುಚ್ಛರಿಸುತ್ತಿದ್ದಾನೆ. ಆ ದೊಡ್ಡ ಪ್ರವಾದನೆಯಲ್ಲಿ, ಶ್ರಮೆಯ ಸೇವಕನು, "ತನ್ನನ್ನು ತಾನು ಮರಣದ ಮಟ್ಟಿಗೆ ಸುರಿದನು" ಮತ್ತು "ಅನೇಕರ ಪಾಪಗಳನ್ನು ಹೊತ್ತುಕೊಂಡನು" (ಯೆಶಾಯ 53:12). ಯೇಸುವಿನ ತ್ಯಾಗವು ಈಡೀ ಲೋಕದ ಪಾಪಕ್ಕೆ ಬದಲಾಗಿ ನೀಡಿದ ಪ್ರಾಯಶ್ಚಿತ್ತ ಯಜ್ಞವಾಗಿತ್ತು. ಈ ಸನ್ನಿವೇಶದಲ್ಲಿ "ಅನೇಕ" ಎಂದರೆ, "ಸುವಾರ್ತೆಯನ್ನು ಸ್ವೀಕರಿಸುವ ಎಲ್ಲರು" (ನೋಡಿರಿ ವ್ಯಾಖ್ಯಾನ 20:28) ಎಂಬರ್ಥಕೊಡುತ್ತದೆ.

**ವಚನ 29.** ಯೇಸು ಅಪೊಸ್ತಲರಿಗೆ, **ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಕುಡಿಯುವ ದಿನದವರೆಗೂ ಇನ್ನು ಕುಡಿಯುವದೇ ಇಲ್ಲ** ಎಂದು ಹೇಳಿದನು.[12] "ದ್ರಾಕ್ಷಾರಸವನ್ನು" (*genēmatos tēs ampelou*) ಎಂಬ ವಾಕ್ಯಭಾಗ ಮಾರ್ಕ 14:25 ಮತ್ತು ಲೂಕ 22:18ರಲ್ಲಿ ಕಾಣಿಸುತ್ತದೆ, ಇದು ಯೆಹೂದ್ಯರಲ್ಲಿ ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. "ದ್ರಾಕ್ಷಾರಸದ" ಮೇಲೆ ಅವರು ಹೇಳುವ ಸಾಂಪ್ರದಾಯಿಕ ಪ್ರಾರ್ಥನೆ, "ಓ ಕರ್ತನೇ, ನಮ್ಮ ದೇವರೆ ವಿಶ್ವದ ಅರಸನೇ, ದ್ರಾಕ್ಷಾರಸವನ್ನು ಸೃಷ್ಟಿಸಿದಾತನೇ ನಿನಗೆ ಸ್ತೋತ್ರ"[13] ಎಂದು ಪ್ರಾರ್ಥಿಸುತ್ತಿದ್ದರು. ವಚನ 27ರಲ್ಲಿ ಯೇಸು ಪಾತ್ರೆಗಾಗಿ ಉಪಕಾರಸ್ತುತಿ ಮಾಡುವಾಗ ಇದೇ ರೀತಿಯ ಪದಗಳನ್ನು ಉಪಯೋಗಿಸಿರಬಹುದು.

"ದ್ರಾಕ್ಷಾರಸ" ಈ ಪದದ ಅರ್ಥ ಚರ್ಚೆಗೆ ಒಳಗಾಗಿತ್ತು. Jack P. Lewis ರವರು ಹೇಳುತ್ತಾರೆ, ದ್ರಾಕ್ಷಾರಸ ತನ್ನಷ್ಟಕ್ಕೆ ತಾನು ಮದಿರೆ ಅಥವಾ ದ್ರಾಕ್ಷೇರಸ ಎಂದು ವ್ಯಾಖ್ಯಾನಿಸಲು ಸಾಧ್ಯವಿಲ್ಲ, ಆದರೆ ಪಾಲೇಸ್ತೀನ ದೇಶದಲ್ಲಿ ಬೇಸಿಗೆ ಕಾಲದಲ್ಲಿ ದ್ರಾಕ್ಷೆ ಪಕ್ವವಾಗುತ್ತವೆ ಮತ್ತು ಅದನ್ನು ಸಂರಕ್ಷಿಸಿ ಇಡಲು ಅಲ್ಲಿ ಶೀತಲ ಯಂತ್ರಗಳಿಲ್ಲ ... ವಸಂತ ಋತುವಿನ ಕಾಲದಲ್ಲಿ ಪಸ್ಕಹಬ್ಬಕ್ಕಾಗಿ ತಾಜಾ ದ್ರಾಕ್ಷಾರಸ ದೊರೆಯುವದು ಅಸಂಭವ.[14]

ಯೆಹೂದ್ಯರು ಆದಾಗ್ಯೂ, ತಮ್ಮ ದ್ರಾಕ್ಷಾರಸದಲ್ಲಿ ನೀರನ್ನು ಬೆರೆಸುವ ಅಭ್ಯಾಸವನ್ನು ಇಟ್ಟುಕೊಂಡಿದ್ದರು. ಒಬ್ಬ ರಬ್ಬಿಯ ಪ್ರಕಾರ, "ಅವರು ದ್ರಾಕ್ಷಾರಸದಲ್ಲಿ ನೀರನ್ನು ಬೆರೆಸುವವರೆಗೆ ಅದನ್ನು ಆಶೀರ್ವಾದಿಸುವ ಪ್ರಾರ್ಥನೆಯನ್ನು ಮಾಡುವದಿಲ್ಲ" ಎಂದು ಹೇಳುತ್ತಾರೆ. ಇನ್ನು ಕೆಲವು ಗುರುಗಳು ನೀರನ್ನು ಬೆರೆಸುವದಕ್ಕೆ ಪೂರ್ವದಲ್ಲಿ ಆಶೀರ್ವಾದ ಪ್ರಾರ್ಥನೆಯನ್ನು ಮಾಡಬೇಕು ಎಂದು ಹೇಳುತ್ತಾರೆ.[15] ಮಿಶ್ನಾದಲ್ಲಿರುವ ಪಸ್ಕ ಹಬ್ಬದ ಆಚರಣೆಯ ವಿವರ ಪ್ರತಿಯೊಂದು ದ್ರಾಕ್ಷಾರಸದ ಪಾತ್ರೆಯಲ್ಲಿ ಬೆರೆಸಲಾಗುತಿತ್ತು.[16] ನೀರಿನ್ನು ಎಂಬುದರಲ್ಲಿ ಸಂದೇಹವಿಲ್ಲ, ತಾಲಮಂಡ್‌ವಿನ ಪ್ರಕಾರ, ಮೂರು ಪಟ್ಟು ನೀರಿಗೆ ಮತ್ತು ಒಂದು ಪಟ್ಟು ದ್ರಾಕ್ಷಾರಸವನ್ನು ಬೆರೆಸುತ್ತಿದ್ದರು.[17] ಆದಿ ಕ್ರೈಸ್ತರು ಸಹ ದ್ರಾಕ್ಷಾರಸವನ್ನು

ನೀರಿನೊಂದಿಗೆ ಮಿಶ್ರಮಾಡುತ್ತಿದ್ದರು. ಕೆಲವು ಬರಹಗಾರರು ಇದನ್ನು ಕರ್ತನ ಭೋಜನವನ್ನು ಆಚರಿಸುವ ಸಮಯದಲ್ಲಿ ಮಾಡುತ್ತಿದ್ದರೆಂದು ಹೇಳುತ್ತಾರೆ.[18]

ವಚನ 29ರಲ್ಲಿ, "ದ್ರಾಕ್ಷಾರಸ" ಪೂರ್ಣ ಔತಣಕ್ಕೆ ಸಂಬಂಧಿಸಿತ್ತು. ಇದು ಉದಾಹರಣೆಯಾಗಿತ್ತು ಯಾವುದಾದರೂ ಪೂರ್ಣವನ್ನು ಸೂಚಿಸಲು ಭಾಗವನ್ನು ಉಲ್ಲೇಖಿಸುವದು. ಯೇಸು ತನ್ನ ಶಿಷ್ಯರಿಗೆ ತಾನು ಈ ಔತಣವನ್ನು ಆತನು ಅವರೊಂದಿಗೆ "ತನ್ನ ತಂದೆಯ ರಾಜ್ಯದಲ್ಲಿ" ಮಾಡುವವರೆಗೆ ಇನ್ನು ಮಾಡುವದೇ ಇಲ್ಲ ಎಂದು ಹೇಳುತ್ತಾನೆ.

ಈ ಹೇಳಿಕೆಯು ಎರಡು ವಿಧದಲ್ಲಿ ಅರ್ಥೈಸಲಾಗಿದೆ. ಮೊದಲನೆಯದಾಗಿ, ದೇವರ ರಾಜ್ಯ (ಸಭೆ) ಪಂಚಾಶತ್ತಮ ದಿನದಂದು ಲೋಕದೊಳಗೆ ಬಂತು (ಅಪೊಸ್ತಲರ ಕೃತ್ಯಗಳು 2). ಯೇಸು ಬಹುಶಃ ಅವರು ಈ ಜ್ಞಾಪಕಾರ್ಥ ಔತಣವನ್ನು ಆಚರಿಸುವಾಗ ತಾನು ಅವರೊಂದಿಗೆ ಇರುತ್ತೇನೆ ಎಂದು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿರಬಹುದು. ಕಣ್ಣಿಗೆ ಕಾಣದೆ ಹೋದಾಗ್ಯೂ, ಕರ್ತನ ದಿನದಲ್ಲಿ ಸಭೆ ಒಟ್ಟಾಗಿ ಸೇರಿಬರುವಾಗ ಕರ್ತನ ಭೋಜನದ ಅತಿಥಿಯಾಗಿ ಆತನು ಅಲ್ಲಿ ಬರುತ್ತಾನೆ.

ಎರಡನೆಯದಾಗಿ, ಅಂತಿಮ ಸಮಯದಲ್ಲಿ ದೇವರ ರಾಜ್ಯದಲ್ಲಿ ಕ್ರಿಸ್ತನೊಂದಿಗೆ ಶಿಷ್ಯರ ಅನ್ಯೋನ್ಯತೆಯನ್ನು ಯೇಸು ಉಲ್ಲೇಖಿಸುತ್ತಿರಬಹುದು. ಹಲವು ವೇದವಾಕ್ಯದ ಭಾಗಗಳು ಮೆಸ್ಸೀಯನ ಔತಣದ ಕುರಿತು ಉಲ್ಲೇಖಿಸುತ್ತವೆ (8:11; ಲೂಕ 13:29; 14:15; 22:16, 17, 29, 30; ಪ್ರಕಟಣೆ 19:9). "ಆ ದಿವಸ" ಕೊನೆಯ ಕಾಲವನ್ನು ಸೂಚಿಸಲು ಉಪಯೋಗಿಸುವ ಸಾಮಾನ್ಯ ಅಭಿವ್ಯಕ್ತಿಯಾಗಿದೆ (24:36; ಲೂಕ 21:34; 2 ಥೆಸಲೋನಿಕ 1:10; 2 ತಿಮೊಥೆ 1:18; 4:8).

ಎರಡು ಅರ್ಥಗಳ ಸಾಧ್ಯತೆಯನ್ನು Lewis ಅವರು ಅನುಮೋದಿಸುತ್ತಾರೆ, ಆದರೆ ಎರಡನೆಯ ಅರ್ಥವನ್ನು ಪ್ರಾಮುಖ್ಯವೆಂದು ಪರಿಗಣಿಸುತ್ತಾರೆ:

> ಪಂಡಿತರು ಸಾಮಾನ್ಯವಾಗಿ ಪರಲೋಕದ ಔತಣವನ್ನು ಸೂಚಿಸುತ್ತಾರೆ, ಮತ್ತು [ಯೇಸುವಿನ ವ್ಯಾಖ್ಯಾನ] ತೆಗೆದುಕೊಳ್ಳಬಾರದು ಎಂದು ಹೇಳುತ್ತಾರೆ ... ಸಾಹಿತ್ಯಕವಾಗಿ, ಆದರೆ ನಿಜವಾದ ಅರ್ಥದಲ್ಲಿ ಕರ್ತನು ಅನ್ಯೋನ್ಯ ಭೋಜನದಲ್ಲಿ ತನ್ನ ಜನರನ್ನು ಒಟ್ಟುಗೂಡಿಸುತ್ತಾನೆ ಅದರಲ್ಲಿ ಅವರು "ಆತನು ಬರುವವರೆಗೆ" ಭಾಗಿಗಳಾಗುತ್ತಾರೆ (1 ಕೊರಿಂಥ 11:26). ಅವರ ಅನ್ಯೋನ್ಯತೆಯ ಮುಂದೆ ಬರುವದನ್ನು ಅದರ ರುಚಿ ಮೊದಲೆ ನೋಡಿದಂತೆ ಇದೆ.[19]

ಯೇಸು ಕರ್ತನ ಭೋಜನವನ್ನು ಸ್ಥಾಪಿಸಿದಾಗ, ಅಪೊಸ್ತಲರಿಗೆ ಆತನು ಏನು ಹೇಳುತ್ತಿದ್ದಾನೆ ಮತ್ತು ಏನು ಮಾಡುತ್ತಿದ್ದಾನೆ ಎಂಬುದನ್ನು ಅರ್ಥ ಮಾಡಿಕೊಳ್ಳುವದು ಕಠಿಣವಾಗಿತ್ತು. ಪುನರುತ್ಥಾನದ ನಂತರ ಮಾತ್ರ ಮತ್ತು ಮುಂದೆ ಯೇಸುವಿನ ಸೂಚನೆಯ ನಂತರ ಈ ಸಂಗತಿಗಳು ಅವರಿಗೆ ಅರ್ಥವಾಗಲು ಪ್ರಾರಂಭವಾದವು (ನೋಡಿರಿ ಲೂಕ 24:44-47). ಸಭೆಯು ಪ್ರಾರಂಭವಾದಾಗ, ಪವಿತ್ರಾತ್ಮಭರಿತರಾದ ಅಪೊಸ್ತಲರು ಯೇಸುವನ್ನು ನಂಬಿ ದೀಕ್ಷಾಸ್ನಾನ ಹೊಂದಿದವರಿಗೆ ಕರ್ತನ ಭೋಜನದ ಕುರಿತಾಗಿ ವಿವರಿಸಿರಬಹುದು. ಈ ಹೊಸ ವಿಶ್ವಾಸಿಗಳು, "ನಿರಂತರವಾಗಿ ಅಪೊಸ್ತಲರಿಗೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳುತ್ತಿದ್ದರು" ಬೋಧಿಸುವದರಲ್ಲಿ ಮತ್ತು ಅನ್ಯೋನ್ಯತೆಯಲ್ಲಿ, ರೊಟ್ಟಿ ಮುರಿಯುವದರಲ್ಲಿ ಮತ್ತು ಪ್ರಾರ್ಥನೆಯಲ್ಲಿ (ಅಪೊಸ್ತಲರ ಕೃತ್ಯಗಳು 2:42; ಒತ್ತಿ ಹೇಳಿರುವದು ಸೇರಿದೆ). ಮತ್ತಾಯನು ತನ್ನ ಸುವಾರ್ತೆಯನ್ನು ಬರೆಯುವ ಸಮಯದವರೆಗೆ, ಕರ್ತನ ಭೋಜನವು ಉತ್ತಮವಾಗಿ ಸ್ಥಾಪನೆಯಾಗಿತ್ತು. ಅಪೊಸ್ತಲರು ಅದು ಸ್ಥಾಪನೆಯಾದ ರಾತ್ರಿಯಲ್ಲಿ ಹೊಂದಿರುವದಕ್ಕಿಂತ ಹೆಚ್ಚಾಗಿ ಆತನ ಮೂಲ ಶೋತ್ರುಗಳು ಜ್ಞಾಪನದ ಕುರಿತಾದ ಪಥ್ಯದೆಡೆಗೆ ಶ್ರೇಷ್ಟವಾದ ತಿಳುವಳಿಕೆಯನ್ನು ಹೊಂದಿದ್ದರು.[20]

## ಪಸ್ಕ ಹಬ್ಬ (26:17-19)

ಪಸ್ಕಹಬ್ಬವು ಐಗುಪ್ತ ದೇಶದ ಚೊಚ್ಚಲು ಮಕ್ಕಳು ಮತ್ತು ಪ್ರಾಣಿಗಳನ್ನು ಕೊಲ್ಲಬೇಕೆಂದು ಆಜ್ಞೆಯನ್ನು ನೀಡಿದ ರಾತ್ರಿಯಂದು ಪ್ರಾರಂಭವಾಯಿತು (ವಿಮೋಚನಕಾಂಡ 11:4, 5; 12:12, 13, 23-29). ದೇವರು ಇಸ್ರಾಯೇಲರಿಗೆ ನೀವು ನನ್ನ ಸೂಚನೆಗಳನ್ನು ಅನುಸರಿಸಿದರೆ ನಿಮ್ಮಲ್ಲಿ ಒಬ್ಬರು ಸಾಯುವದಿಲ್ಲ ಎಂದು ವಾಗ್ದಾನ ಮಾಡಿದ್ದನು (ವಿಮೋಚನ ಕಾಂಡ 11:7). ಆತನು ಮೋಶೆಗೆ ನಿರ್ದೇಶಿಸಿ ಜನರು ಒಂದು ವರ್ಷದ ಗಂಡು ಕುರಿಯನ್ನು ಈ ತಿಂಗಳಿನ ಹತ್ತನೆಯ ದಿನದಲ್ಲಿ ತೆಗೆದುಕೊಳ್ಳಬೇಕು (ವಿಮೋಚನಕಾಂಡ 12:3-5). ಪ್ರತಿಯೊಂದು ಮನೆಯವರು ಹದಿನಾಲ್ಕನೆಯ ದಿನದವರೆಗೆ ಅವುಗಳನ್ನು ಇಟ್ಟುಕೊಂಡು ಆ ದಿನದ ಸಂಜೆ ವೇಳೆಯಲ್ಲಿ ಕೊಯ್ಯಬೇಕು. ಅದನು ಸಂಪೂರ್ಣವಾಗಿ ಬೆಂಕಿಯಲ್ಲಿ ಸುಟ್ಟು ಆ ರಾತ್ರಿಯಲ್ಲಿ ಹುಳಿಯಿಲ್ಲದ ರೊಟ್ಟಿ ಮತ್ತು ಕಹಿಯಾದ ಪಲ್ಯದೊಂದಿಗೂ ತಿನ್ನಬೇಕು (ವಿಮೋಚನಕಾಂಡ 12:6, 8). ಈ ದಿನವು ಇಸ್ರಾಯೇಲರ ಇತಿಹಾಸದಲ್ಲಿ ಮರೆಯಲಾರದ ದಿನವಾಯಿತು. ಈ ಜ್ಞಾಪಕಾರ್ಥವಾದ ಸಂಗತಿಯನ್ನು ಪ್ರತಿಬಿಂಬಿಸುವದಕ್ಕಾಗಿ ಅವರ ಪಂಚಾಗ ಸಹ ಬದಲಾಯಿತು. ಮೊದಲನೆ ಪಸ್ಕಹಬ್ಬವನ್ನು ಆಚರಿಸಿದ ತಿಂಗಳನ್ನು ಅವರು ವರ್ಷದ ಮೊದಲನೆಯ ತಿಂಗಳು ಎಂದು ಪರಿಗಣಿಸಿದರು (ವಿಮೋಚನಕಾಂಡ 12:2), ಅದನ್ನು ಕಾನಾನ್ಯ ಹೆಸರು ಅಬೀಬ ಎಂದು ಕರೆಯುತ್ತಾರೆ (ವಿಮೋಚನಕಾಂಡ 13:4), ಮತ್ತು ಬಾಬೇಲ್‌ನಲ್ಲಿ ಹೆಸರಾದ ನಿಸಾಹ ಎಂದು ಸಹ ಕರೆಯುತ್ತಾರೆ (ಎಸ್ತೆರ 3:7; ನೆಹಮಿಯ 2:1).

ಇಸ್ರಾಯೇಲರಿಗೆ ಈ ಹಬ್ಬವನ್ನು ಹೇಗೆ ಆಚರಿಸಬೇಕು ಎಂಬುದಕ್ಕೆ ಕಟ್ಟುನಿಟ್ಟಾದ ನಿಯಮಗಳು ಕೊಡಲ್ಪಟ್ಟಿದ್ದವು. ಪಸ್ಕದ ಕುರಿಯನ್ನು ಸಂಪೂರ್ಣವಾಗಿ ಬೆಂಕಿಯಲ್ಲಿ ಸುಡುಬೇಕಾಗಿತು; ಅದನ್ನು ಹಸಿಯಾಗಿ ಆಗಲಿ ಇಲ್ಲವೇ ಕುದಿಸಿಯಾಗಲಿ ತಿನ್ನಬಾರದು. ಆ ರಾತ್ರಿ ಈಡೀ ಕುರಿಮರಿಯನ್ನು ತಿನ್ನಬೇಕು, ಇಲ್ಲವಾದಲ್ಲಿ ಉಳಿದ ಮಾಂಸವನ್ನು ಬೆಂಕಿಯಲ್ಲಿ ಸುಟ್ಟುಬಿಡಬೇಕು (ವಿಮೋಚನಕಾಂಡ 12:9, 10). ಪ್ರತಿಯೊಂದು ಮನೆಯವರು ಒಂದು ಕುರಿಯನ್ನು ಹೊಂದಿರಬೇಕು ಅಥವಾ ಎರಡು ಚಿಕ್ಕ ಕುಟುಂಬಗಳು ಸೇರಿಕೊಂಡು ಅದನ್ನು ತಿನ್ನಬೇಕು (ವಿಮೋಚನಕಾಂಡ 12:4). ಭೋಜನದಲ್ಲಿ ಭಾಗವಹಿಸುವವರೆಲ್ಲರೂ ನಡುವನ್ನು ಕಟ್ಟಿ ಕೆರವನ್ನು ಮೆಟ್ಟಿ ಕೋಲು ಹಿಡಿದುಕೊಂಡು ತ್ವರೆಯಾಗಿ ತಿನ್ನಬೇಕು, ಎಚ್ಚರಿಕೆಯನ್ನು ನೀಡಿದ ಕ್ಷಣದಲ್ಲಿ ಪ್ರಯಾಣಣಿಸಲು ಸಿದ್ಧರಾಗಿರಬೇಕು (ವಿಮೋಚನಕಾಂಡ 12:11). ಪ್ರಾಣಿಯ ರಕ್ತವನ್ನು ತಾವು ಭೋಜನ ಮಾಡುವ ಮನೆಯ ಬಾಗಲಿನ ಎರಡು ನಿಲುವ ಕಂಬಗಳಿಗೂ ಮೇಲಿನ ಪಟ್ಟಿಗೂ ಹಚ್ಚಬೇಕು (ವಿಮೋಚನಕಾಂಡ 12:7).

ದೇವರು "ಪಸ್ಕ" ಎಂಬ ಹೆಸರನ್ನು ಈ ಘಟನೆಗೆ ಕೊಟ್ಟಿದ್ದಾನೆ (ವಿಮೋಚನಕಾಂಡ 12:11), ಆತನು ಯಾವ ಮನೆಗೆ ರಕ್ತ ಹಚ್ಚಿರುವದನ್ನು ಕಾಣುವನೋ ಅದನ್ನು ದಾಟಿ ಹೋಗುವನು. ಮೋಶೆಯು ಇಸ್ರಾಯೇಲರ ಹಿರಿಯರನ್ನು ಸೇರಿಸಿ ಅವರಿಗೆ ಈ ಸೂಚನೆಗಳನ್ನು ನೀಡಿದನು. ಇದು ಶಾಶ್ವತವಾದ ಧಾರ್ಮಿಕ ವಿಧಿಯಾಗಿತ್ತು. ವಾಗ್ದತ್ತ ದೇಶವನ್ನು ಅವರು ಪ್ರವೇಶಿಸಿದ ನಂತರ, ಅವರು ಇದನ್ನು ಆಚರಿಸುವದನ್ನು ಮತ್ತು ತಮ್ಮ ಮಕ್ಕಳಿಗೆ ಇದನ್ನು ವಿವರಿಸುವದನ್ನು ಮುಂದುವರೆಸಿದರು (ವಿಮೋಚನಕಾಂಡ 12:24-27).

ಕ್ರೈಸ್ತರು ಪಸ್ಕವನ್ನು ಆಚರಿಸುವ ಆಜ್ಞೆಯನ್ನು ಹೊಂದಿಲ್ಲ. ಅದು ನಮಗೆ ಸಮಂಜಸವಾಗಿಯೂ ಇಲ್ಲ. ಪೌಲನು, "ಹಳೆ ಹುಳಿಯನ್ನು ತಗೆದುಹಾಕಿ ಹೊಸ ಕಣಕದಂತವರಾಗಿರ್ರಿ ನೀವು ಹುಳಿಯಿಲ್ಲದವರಾಗಿದ್ದೀರಿ ಯಾಕೆಂದರೆ ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದು ಯಾವುದೆಂದರೆ ಕ್ರಿಸ್ತನೆ" ಎಂದು ಬರೆದಿದ್ದಾನೆ

(1 ಕೊರಿಂಥ 5:7). ಪೌಲನು ಪಸ್ಕದಲ್ಲಿ ಯಜ್ಞ ಅರ್ಪಿಸಿರುವ ಪಸ್ಕದ ಕುರಿಯೊಂದಿಗೆ ಕ್ರಿಸ್ತನ ಮರಣವನ್ನು ಹೋಲಿಸುತ್ತಾನೆ. ಕುರುಮರಿ ಐಗುಪ್ತರ ದಾಸತ್ವದಿಂದ ಯೆಹೂದ್ಯರನ್ನು ಬಿಡುಗಡೆಗೊಳಿಸಿದ್ದರ ಮತ್ತು ಅವರನ್ನು ದೇವರ ಮಕ್ಕಳೆಂದು ಆಯ್ದುಕೊಂಡದ್ದರ ಆಚರಣೆಯ ನಿರಂತರವಾದ ಜ್ಞಾಪನವಾಗಿದೆ. ಪೌಲನು ಕೊರಿಂಥದವರಿಗೆ ಬರೆಯುವಾಗ ನಮ್ಮ ಪಾಪಗಳಿಗಾಗಿ ಕ್ರಿಸ್ತನ ಸಮರ್ಪಿಸಿದ ಯಜ್ಞದ ಮೂಲಕ ಎಲ್ಲಾ ಕ್ರೈಸ್ತರಿಗೆ ದೇವರು ಅವರನ್ನು ವಿಮೋಚಿಸಿದ್ದನ್ನು ಮತ್ತು ಅವರನ್ನು ತನ್ನ ವಿಶೇಷ ಜನರೆಂದು, ಕರ್ತನ ಸಭೆಯೆಂದು ಸ್ವೀಕರಿಸಿದ್ದನ್ನು ಜ್ಞಾಪಿಸುತ್ತಾನೆ. ಇಸ್ರಾಯೇಲರು ತಮ್ಮ ಜೀವಿತದಿಂದ. ಇಸ್ರಾಯೇಲರು ವಾಗ್ದಾತ್ತ ದೇಶದಲ್ಲಿ ತಮ್ಮ ಹೊಸ ಜೀವಿತಕ್ಕೆ ಹಾನಿಮಾಡುವ ಯಾವುದಾದರು ಹಳೆಯ ಸಂಗತಿ ಇದ್ದಲ್ಲಿ ಅದನ್ನು ತೆಗೆದುಹಾಕಬೇಕು, ಕ್ರೈಸ್ತರಾದ ನಾವು ನಮ್ಮ ಜೀವಿತದಲ್ಲಿ ಹೊಸ ಜೀವಿತಕ್ಕೆ ಅಡತಡೆಯನ್ನುಂಟು ಮಾಡುವ ಪಾಪಮಯ ವರ್ತನೆಗಳನ್ನು ಮತ್ತು ಕೃತ್ಯಗಳನ್ನು ತೆಗೆದುಹಾಕಬೇಕು (ಕೊಲಸ್ಸೆ 3:1-11).

## ಯೂದನು ಏನನ್ನು ಕಳೆದುಕೊಂಡನು (26:20-25)

ಪಸ್ಕಹಬ್ಬದ ಭೋಜನ ಮುಕ್ತಾಯವಾಗುವ ಪೂರ್ವದಲ್ಲಿ ಯೂದನು ಗುಂಪನ್ನು ಬಿಟ್ಟು ಹೋದನು (ಯೋಹಾನ 13:30) ಮತ್ತು ಅನೇಕ ಅರ್ಥಪೂರ್ಣ ಅನುಭವಗಳನ್ನು ಕಳೆದು ಕೊಂಡನು. ಅವನು ಕರ್ತನ ಭೋಜನದ ಸ್ಥಾಪನೆಯ ಸಮಯದಲ್ಲಿ ಗೈರು ಹಾಜರಿದ್ದನು, ಅದು ಪಾಪಗಳಿಗಾಗಿ ಕ್ರಿಸ್ತನ ಕೊನೆಯ ಯಜ್ಞದ ಜ್ಞಾಪಕಾರ್ಥವಾಗಿದೆ (26:26-29). ಆತನು ಯೋಹಾನ 14:1-21ರಲ್ಲಿ ಇತರ ಅಪೊಸ್ತಲರಿಗೆ ಹೇಳಿದ ಕರ್ತನ ಪ್ರೋತ್ಸಾಹದಾಯಕ ನುಡಿಗಳನ್ನು ಆಲಿಸಲಿಲ್ಲ. ಯೇಸು ಅವರನ್ನು ಸಂತೈಸಲು ಅವರಿಗೆ ಬೋಧಿಸಲು ಆತನ ಮಾತುಗಳನ್ನು ಅವರಿಗೆ ಜ್ಞಾಪಿಸಲು ಮತ್ತು ಅವರನ್ನು ಎಲ್ಲಾ ರೀತಿಯಲ್ಲಿ ಸತ್ಯದಲ್ಲಿ ನಡೆಸಲು ಪವಿತ್ರಾತ್ಮನನ್ನು ಕಳುಹಿಸುತ್ತೇನೆ ಎಂದು ಅಪೊಸ್ತಲರಿಗೆ ಹೇಳಿದ್ದು ಅವನಿಗೆ ಗೊತ್ತೇ ಇರಲಿಲ್ಲ (ಯೋಹಾನ 14:23-27; 15:26, 27; 16:13-15). ಆತನಲ್ಲಿ ನೆಲೆಯಾಗಿರುವದರ ಮಹತ್ವವನ್ನು ತಿಳಿಸಲು ಕರ್ತನು ದ್ರಾಕ್ಷೇಬಳ್ಳಿ ಮತ್ತು ಕೊಂಬೆಗಳ ಕುರಿತು ಬೋಧಿಸಿದಾಗ ಆತನು ಗೈರುಹಾಜರಾಗಿದ್ದನು (ಯೋಹಾನ 15:1-17). ಆತನು ಶಿಷ್ಯರಿಗೆ ಕಲಿಸಿದ ಕರ್ತನ ಪ್ರಾರ್ಥನೆಯನ್ನು ಸಹ ಕಳಕೊಂಡಿದ್ದನು, ಅದು ವಿಶ್ವಾಸಿಗಳ ಮಧ್ಯದಲ್ಲಿ ಆತನು ಬಯಸುವ ಐಕ್ಯತೆಯನ್ನು ವ್ಯಕ್ತಪಡಿಸುತ್ತದೆ (ಯೋಹಾನ 17:1-26).

## ಕರ್ತನ ಭೋಜನವನ್ನು ಆಚರಿಸುವದು (26:26-29)

ಅನೇಕ ಧಾರ್ಮಿಕ ಗುಂಪುಗಳು ವಾರದ ಬೇರೆಬೇರೆ ದಿನಗಳಲ್ಲಿ ಮತ್ತು ವಿಶೇಷವಾದ ಸಂದರ್ಭಗಳಲ್ಲಿ ಉದಾಹರಣೆಗೆ ವಿವಾಹ, ಅಂತ್ಯಸಂಸ್ಕಾರ, ಹುಟ್ಟಿದ ದಿನದಂದು ಮತ್ತು ದೀಕ್ಷಾಸ್ನಾನದಂದು ಆಚರಿಸುತ್ತವೆ. ಇದಕ್ಕೆ ಬೆಂಬಲ ಸತ್ಯವೇದದಿಂದ ಬಂದಿರುವದಿಲ್ಲ. ನಾವು ಕರ್ತನ ಭೋಜನವನ್ನು ಯಾವುದೇ ಮಧ್ಯಂತರದಲ್ಲಿ ಅಥವಾ ವಾರದ ಮೊದಲನೆಯ ದಿನವನ್ನು ಹೊರತು ಪಡಿಸಿ ಯಾವುದೇ ದಿನದಲ್ಲಿ ಆಚರಿಸುವದಕ್ಕೆ ವಾಕ್ಯಭಾಗದ ಅಧಿಕಾರವನ್ನು ನಾವು ಕಾಣುವದಿಲ್ಲ. ಪ್ರಾಚೀನ ಇತಿಹಾಸ ತಜ್ಞರ ಹೇಳಿಕೆಯ ಪ್ರಕಾರ ಭೋಜನವನ್ನು ಭಾನುವಾರದಂದು ಮಾತ್ರ ಆಚರಿಸಬೇಕು.

ಲೂಕನು ಕ್ರೈಸ್ತರು "ರೊಟ್ಟಿ ಮುರಿಯಲು … ವಾರದ ಮೊದಲನೆ ದಿನದಂದು" ಸೇರಿ ಬರುತ್ತಿದ್ದರೆಂದು ದಾಖಲಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 20:7). ಇದೇ ರೀತಿಯಾಗಿ ಇದು ಕೊರಿಂಥದಲ್ಲಿರುವ ಕ್ರೈಸ್ತರ ಅಭ್ಯಾಸವು ಸಹ ಆಗಿತ್ತು (1 ಕೊರಿಂಥ 11:20, 21, 33; 16:2). ನಾವು ಆದಿ ಇತಿಹಾಸ ತಜ್ಞರಿಂದ ಹಲವು ಶತಮಾನಗಳವರೆಗೆ ಸಭೆಯು ಇದನ್ನೇ ಮಾಡುವದನ್ನು ಮುಂದುವರೆಸಿತು ಎಂದು ತಿಳಿದುಕೊಳ್ಳುತ್ತೇವೆ.[21] ಕ್ರೈಸ್ತರು ಏಕೆ ಕರ್ತನ

ಭೋಜನವನ್ನು ಭಾನುವಾರದಂದು ಆಚರಿಸಬೇಕು? ಭಾನುವಾರವು, ವಾರದ ಮೊದಲನೆಯ ದಿನವಾಗಿದೆ, ಯೇಸು ಕ್ರಿಸ್ತನ ಮರಣದಿಂದ ಎದ್ದು ಬಂದ ದಿನವಾಗಿದೆ (28:1-7; ಲೂಕ 24:1-7).[22] ಪ್ರತಿಯೊಂದು ಪುನರುತ್ಥಾನದ ನಂತರ ಕಾಣಿಸಿಕೊಂಡಿರುವ ಉಲ್ಲೇಖಗಳು ಆ ಒಂದು ದಿನ ಅದು ಭಾನುವಾರವೆಂದು ಸೂಚಿಸಲಾಗಿದೆ.[23] ಯೇಸು ಪರಲೋಕಕ್ಕೆ ಏರಿಹೋದದ್ದು ಭಾನುವಾರ (ಅಪೊಸ್ತಲರ ಕೃತ್ಯಗಳು 1:3, 9). ಆ ದಿವಸ ಸಭೆ ಲೋಕ ದಲ್ಲಿ ಜನ್ಮತಾಳಿತು (ಅಪೊಸ್ತಲರ ಕೃತ್ಯಗಳು 2:1), ಆದುದರಿಂದ ಪಂಚಶತ್ತಮ ದಿನವನ್ನು ಯಾವಾಗಲು ವಾರದ ಮೊದಲನೆಯ ದಿನದಂದು ಆಚರಿಸುತ್ತಾರೆ (ಯಾಜಕಕಾಂಡ 23:15-21). ವಾರದ ಯಾವುದೇ ದಿನವನ್ನು ಈ ಪದನಾಮದಿಂದ ಕರೆಯುವದಕ್ಕೆ ಅಥವಾ ಕರ್ತನ ಭೋಜನವನ್ನು ಬೇರೆ ದಿವಸ ಆಚರಿಸಲಿಕ್ಕೆ ಕಾರಣಗಳಿಲ್ಲ.

## ಕರ್ತನ ಭೋಜನ (26:26-29)

**ಕರ್ತನ ಭೋಜನ ಐದು ಪ್ರಾಮುಖ್ಯವಾದ ದೃಷ್ಟಿಕೋನಗಳನ್ನು ಒಳಗೊಂಡಿದೆ:**

1. **ಮೇಲಕ್ಕೆ ದೃಷ್ಟಿಸುವ ಕೃತಜ್ಞತಾಸ್ತುತಿ (1 ಕೊರಿಂಥ 11:23-25);**
2. **ಹಿಂದಕ್ಕೆ ದೃಷ್ಟಿಸುವ ನೆನಪು (1 ಕೊರಿಂಥ 11:24, 25);**
3. **ಹೊರಗಡೆ ದೃಷ್ಟಿಸುವ ಪ್ರಕಟನೆ (1 ಕೊರಿಂಥ 11:26);**
4. **ಮುಂದಕ್ಕೆ ದೃಷ್ಟಿಸುವ ಪೂರ್ವ ನಿರೀಕ್ಷಣೆ (1 ಕೊರಿಂಥ 11:26);**
5. **ಒಳಕ್ಕೆ ದೃಷ್ಟಿಸುವ ಸ್ವ-ಪರೀಕ್ಷೆ (1 ಕೊರಿಂಥ 11:27, 28).**

---

ಟಿಪ್ಪಣಿಗಳು

[1]Josephus *Wars* 6.9.3; ನೋಡಿರಿ Mishnah *Pesahim* 5.1. [2]Mishnah *Pesahim* 5.5–10; 7:1, 2. [3]ಯೋಹಾನ 13ರಲ್ಲಿ ಇರುವ ಭೋಜನವು ಯೇಸು ಸ್ಥಾಪಿಸಿರುವ ಕರ್ತನ ಭೋಜನದ ಹಾಗೆಯೇ ವಿವರಿಸಲಾಗಿದೆ (ಅದನ್ನು ಎಲ್ಲಾ ಸುವಾರ್ತೆಗಳು ಅದೇ ರೀತಿಯಲ್ಲಿ ವರ್ಣಿಸಿರುತ್ತವೆ). ಯೋಹಾನ 18:28ರಲ್ಲಿ ಯೆಹೂದ್ಯ ನಾಯಕರು ಪಸ್ಕದ ಊಟವನ್ನು ಇಡೀ ಹಬ್ಬದ ದಿನವೆಲ್ಲಾ ತಿನ್ನಬೇಕಾಗಿತ್ತು ಎಂದು ಸೂಚಿಸುತ್ತದೆ, ಪಸ್ಕ ಮಾತ್ರ ಮತ್ತು ಹುಳಿಯಿಲ್ಲದ ರೊಟ್ಟಿ ಅದರ ನಂತರ ಮುಂದುವರಿಯುತ್ತದೆ. ಈ ಸಮಸ್ಯೆಯ ಚರ್ಚೆಯನ್ನು ನೋಡಿರಿ Frank Pack's *The Gospel According to John,* Part 2, The Living Word Commentary (Austin, Tex.: Sweet Publishing Co., 1977), 42–44. ಯೋಹಾನ 19:14, 31, 42ರಲ್ಲಿ ಸಿದ್ಧತೆಯ ದಿನವು ಶುಕ್ರವಾರ ವೆಂದು ತೋರಿಸುತ್ತದೆ, ಯೇಸು  ನ ಮುಂದೆ ನಿಂತುಕೊಂಡಾಗ ಅದು ಸಬ್ಬತ್ತಿನ ಮೊದಲ ದಿನವಾಗಿತ್ತು (ಅದು ಪಸ್ಕದ ವಾರದಲ್ಲಿ ಬರುತ್ತದೆ). [4]ನೋಡಿರಿ Mishnah *Pesahim* 10.1–9; John Lightfoot, *A Commentary on the New Testament from the Talmud and Hebraica: Matthew—1 Corinthians,* vol. 2, *Matthew—Mark* (Oxford University Press, 1859; reprint, Grand Rapids, Mich.: Baker, 1979), 346–49. [5]ಕಹಿಪಲ್ಯವು ಇಸ್ರಾಯೇಲ್ಯರು ಐಗುಪ್ತದಲ್ಲಿ ಅನುಭವಿಸಿದ ಕಹಿ ಅನುಭವವನ್ನು ಸೂಚಿಸುತ್ತದೆ. ಹುಳಿಯಿಲ್ಲದ ರೊಟ್ಟಿ ದೇವರು ಅವರನ್ನು ಐಗುಪ್ತದಿಂದ ಅವಸರವಾಗಿ ಬಿಡಿಸಿರುವದನ್ನು ನೆನಪುಮಾಡುತ್ತದೆ. (Mishnah *Pesahim* 10.5.) [6]ದೇವಾಲಯದಲ್ಲಿ ಬಲಿಅರ್ಪಿಸಿರುವ ಕುರಿಮರಿ ಇದೆ ಆಗಿತ್ತು, ಇಸ್ರಾಯೇಲಿನ ಪ್ರಥಮವಾಗಿ ಹುಟ್ಟಿರುವದನ್ನು ತೆಗೆದಿಡುವದು ಮೂಲ ಪಸ್ಕವನ್ನು ಪುನ ನೆನಪಿಸುತ್ತದೆ. (Ibid.) [7]ಯೋಹಾನ 13:26ರಲ್ಲಿ, ಗ್ರೀಕ್ ಶಬ್ದ "ಆಹಾರದ ತುಂಡು"ನ್ನು *(psōmion)* ಎಂದು ಕರೆ ಯುವರು ಅದು ಕುರಿಮರಿಯ ಚಿಕ್ಕ ತುಂಡನ್ನು ಸೂಚಿಸುತ್ತದೆ, ಆದರೆ ಅದು ಹೆಚ್ಚಾಗಿ ರೊಟ್ಟಿಯ ತುಂಡನ್ನು ಸೂಚಿಸುವಂಥದ್ದಾಗಿದೆ (ನೋಡಿರಿ NIV; NRSV; NJB; NEB; JNT). ಇದು ಯೋಹಾನನ ಹೇಳಿಕೆಗೆ ಕೀರ್ತನೆ 41:9ರಿಂದ ಹೇಳಿ ರುವದು ಹೊಂದಾಣಿಕೆಯಾಗುತ್ತದೆ, ಅಲ್ಲಿ ಯೋಹಾನನು "ರೊಟ್ಟಿ" *(artos)* ಎನ್ನುವ ಪದವನ್ನು ಉಪಯೋಗಿಸಿದ್ದಾನೆ (ಯೋಹಾನ 13:18). [8]"ಪ್ರಭಗಳ ಭೋಜನ" "Eucharist" ಎನ್ನುವ ಪದವನ್ನು ಎರಡನೆ ಶತಮಾನದ ಪ್ರಾರಂಭದಲ್ಲಿ ಕರ್ತನ ಭೋಜನಕ್ಕಾಗಿ ಹೇಳಲು ಉಪಯೋಗಿಸುತ್ತಿದ್ದರು. (Ignatius

*Philadelphians* 4.1; *Smyrnaeans* 6.2; 8.1; *Didache* 9.1, 5.) [9]Marvin R. Wilson, "Passover," in *The International Standard Bible Encyclopedia,* rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:678. [10]ಲೂಕ 22:17-20ರ ಸುತ್ತಾಮುತ್ತಾ ಇರುವ ಮೂಲ ಪಾಠದ ಸಮಸ್ಯೆಗಳನ್ನು ಚರ್ಚಿಸಲು ನೋಡಿರಿ Bruce M. Metzger, *A Textual Commentary on the Greek New Testament,* 2d ed. (Stuttgart: German Bible Society, 1994), 148–50.

[11]Ibid., 54. ಲೂಕ 22:20ರಲ್ಲಿ ಓದುವದು ವಿವಾದರಹಿತವಾಗಿದೆ. [12]ಲೂಕನು ಮೊದಲು ಹೇಳಿರುವ ಪಾತ್ರೆಯ ವಿಷಯದೊಂದಿಗೆ (ಸ್ವಲ್ಪ ವ್ಯತ್ಯಾಸವಿದ್ಯಾಗ್ಯೂ) ಸಹಕಳಿಸುತ್ತಾನೆ (ಲೂಕ 22:17, 18). [13]Mishnah *Berakoth* 6.1. [14]Jack P. Lewis, *The Gospel According to Matthew*, Part 2, The Living Word Commentary (Austin, Tex.: Sweet Publishing Co., 1976), 147. [15]Mishnah *Berakoth* 7.5. [16]Mishnah *Pesahim* 10.2, 4, 7. [17]Talmud *Pesahim* 108b. [18]Justin Martyr *Apology* 1.67; Clement of Alexandria *Instructor* 2.2; Cyprian *Epistles* 62.2. [19]Lewis, 148. [20]Donald A. Hagner, *Matthew 14—28,* Word Biblical Commentary, vol. 33B (Dallas: Word Books, 1995), 775.

[21]*Didache* 14.1; Justin Martyr *Apology* 1.67; Eusebius *Ecclesiastical History* 3.27. [22]ಅನೇಕ ಮೊದಲಿನ ಕ್ರೈಸ್ತ ಬರಹಗಾರರು ಯೇಸುವಿನ ಪುನರುತ್ಥಾನ ಮತ್ತು ಕರ್ತನ ದಿನದಂದು ಆರಾಧಿಸುವದರ ಮಧ್ಯ ಸಂಪರ್ಕದ ವಿಷಯವಾಗಿ ಒತ್ತಿ ಹೇಳಿದ್ದಾರೆ. (*Barnabas* 15.8, 9; Ignatius *Magnesians* 9; Justin Martyr *Apology* 1.67; Eusebius *Ecclesiastical History* 3.27.) [23]David L. Roper, *Acts 1—14,* Truth for Today Commentary (Searcy, Ark.: Resource Publications, 2001), 25.